


# ಎಲ್ಲವೂ ಉಪ್ಪುಪ್ಪು!

‘ಡಿ ಸಾಲ್’ ಹೋಟೆಲಿನ ಒಳಾಂಗಣ ನೋಟ

ಈ ಚಿತ್ರದಲ್ಲಿ ಕಾಣುತ್ತಿರುವ ಹೋಟೆಲ್ ಹೆಸರು ‘ಡಿ ಸಾಲ್’ ಇಲ್ಲಿ ಉಪ್ಪನ್ನು ಅಡುಗೆಗೆ ಮಾತ್ರ ಬಳಸುವುದಿಲ್ಲ. ಬದಲಾಗಿ ನೆಲಹಾಸು, ಗೋಡೆ, ಪೀಠೋಪಕರಣ, ಹಾಸಿಗೆ, ಹೊದಿಕೆ ಹೀಗೆ ಎಲ್ಲವೂ ಇಲ್ಲಿ ಉಪ್ಪುಮಯ! ಈ ಹೋಟೆಲ್ ಇರುವುದು ದಕ್ಷಿಣ ಅಮೆರಿಕಾದ ಬೊಲಿವಿಯಾದಲ್ಲಿ.

ಹದಿನೈದು ಮಲಗುವ ಕೋಣೆ, ಭವ್ಯ ವಿಶ್ರಾಂತಿ ಕೊಠಡಿ, ಆಕರ್ಷಕ ಅಡುಗೆ ಕೋಣೆ ಇರುವ ಸುಸಜ್ಜಿತ ಹೋಟೆಲ್ ಇದು. ಹೋಟೆಲ್ ಜೊತೆಗೆ ಇಲ್ಲಿಯ ನೈಸರ್ಗಿಕ ಸೌಂದರ್ಯವನ್ನು ಕಣ್ತುಂಬಿಸಿಕೊಳ್ಳಲು ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಾರೆ. ಬೊಲಿವಿಯಾದ ಇತರ ಪ್ರವಾಸಿ ತಾಣಗಳಿಗೆ ಈ ಹೋಟೆಲ್ ಪ್ರವೇಶದ್ವಾರವಿದ್ದಂತೆ.

ಇಲ್ಲಿ ಎಲ್ಲವೂ ಉಪ್ಪಾಗಿರುವುದು ಸತ್ಯವೇ, ಎಂದು ಪರೀಕ್ಷಿಸಲು ಕೆಲವರು ಇಲ್ಲಿನ ಗೋಡೆ, ಪೀಠೋಪಕರಣಗಳನ್ನು ನೆಕ್ಕಿ ನೋಡುತ್ತಾರಂತೆ. ಹೀಗಾಗಿ ಇಲ್ಲಿ ಎಲ್ಲವೂ ಎಂಜಲು. ಹೀಗೆ ಎಲ್ಲರೂ ನೆಕ್ಕಿದರೂ ಇಲ್ಲಿಯ ಉಪ್ಪಿನಂಶವೇನು ಕಡಿಮೆಯಾಗಿಲ್ಲ ಎಂಬುದೇ ಸೋಜಿಗ.

ಈ ಹೋಟೆಲಿನ ನೆಲದ ಕೆಲವು ಅಡಿಗಳಷ್ಟು ಆಳ ಉಪ್ಪಿನ ಹಾಸಿನಿಂದಲೇ ಕೂಡಿದೆ. ಅಲ್ಲಲ್ಲಿ ನೀರಿನ ಕಿರು–ಹೊಂಡಗಳನ್ನು ನಿರ್ಮಿಸಲಾಗಿದೆ. ಇಲ್ಲಿಯ ನೀರು ಮಿಶ್ರಿತ ಉಪ್ಪಿನಲ್ಲಿ ಮೊಬೈಲ್ ಬ್ಯಾಟರಿ ಮತ್ತು ಕಂಪ್ಯೂಟರ್‌ಗಳಲ್ಲಿರುವ ಲೀಥಿಯಂ ಅಂಶವಿದೆ. ಈ ಹೋಟೆಲ್‌ನಲ್ಲಿ ಒಂದು ರಾತ್ರಿ ತಂಗಲು 6,600 ರೂಪಾಯಿ ಬೆಲೆ ತೆರಬೇಕು.

ಅಂದ ಹಾಗೆ ಜಗತ್ತಿನ ಒಟ್ಟು ಬೇಡಿಕೆಯ ಸುಮಾರು ಅರ್ಧದಷ್ಟು ಲೀಥಿಯಂ ಬೊಲಿವಿಯಾ ದೇಶದಿಂದಲೇ ಪೂರೈಕೆಯಾಗುತ್ತದಂತೆ.

■ ಸುಭಾಸ ಯಾದವಾಡ



ಹಾಸಿಗೆ ಹೊದಿಕೆಗಳಿರುವ ಸುಸಜ್ಜಿತವಾದ ಉಪ್ಪಿನ ‘ಬೆಡ್ ರೂಮ್’




ಉಪ್ಪಿನ ಕುರ್ಚಿಗಳ ಮೇಲೆ ಕುಳಿತು ಊಟ ಮಾಡುತ್ತಿರುವ ಪ್ರವಾಸಿಗರು